ಚುಕ್ಕೆ ಗುರುತಿಲ್ಲದ ಪ್ರಶ್ನೆ 24 : 75

ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

ಉತ್ತರಿಸುವ ಸಚಿವರು : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಬೆಂಗಳೂರು ಜಲಮಂಡಳಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಶಾಂತಿನಗರ ಕ್ಷೇತ್ರ ವ್ಯಾಪ್ತಿಯಲ್ಲಿರುವ ಒಳಚರಂಡಿ ಕೊಳವೆಗಳ ಉದ್ದ ವಿಸ್ತೀರ್ಣವೆಷ್ಟು?	ನಗರದಲ್ಲಿ ಎರಡು ವಿಧದ ಒಳಚರಂಡಿ ಕೊಳವೆ ಮಾರ್ಗದ ವ್ಯವಸ್ಥೆಯಿದೆ. ಅವುಗಳೆಂದರೆ, ಅ) 150 ಎಂ.ಎಂ. ರಿಂದ 400 ಎಂ.ಎಂ. ಗಾತ್ರದ ಅಡ್ಡ ಮಗ್ಗುಲಿನ ಒಳಚರಂಡಿ ವ್ಯವಸ್ಥೆ. ಆ) 450 ಎಂ.ಎಂ. ರಿಂದ 1800 ಎಂ. ಎಂ. ಗಾತ್ರದ ಒಳಚರಂಡಿ ಉಪ ಮುಖ್ಯ ಕೊಳವೆ ಮಾರ್ಗದ ವ್ಯವಸ್ಥೆ. ಶಾಂತಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು ಸುಮಾರು 120 ಕಿ.ಮೀ. ಉದ್ದದ ಅಡ್ಡಮಗ್ಗುಲಿನ ಒಳಚರಂಡಿ ಕೊಳವೆ ಮಾರ್ಗದ ಹಾಗೂ ಸುಮಾರು 20 ಕಿ.ಮೀ. ಉದ್ದದ ಒಳಚರಂಡಿ ಉಪ ಮುಖ್ಯ ಕೊಳವೆ ಮಾರ್ಗದ ವ್ಯವಸ್ಥೆಯಿದೆ.
ಆ.	ಅವುಗಳಲ್ಲಿ ಹಳೆಯ ಮತ್ತು ಹೊಸ ಕೊಳವೆಗಳೆಷ್ಟು?	120 ಕಿ.ಮೀ. ಉದ್ದದ ಹಳೆಯ ಅಡ್ಡ ಮಗ್ಗುಲಿನ ಒಳಚರಂಡಿ ಕೊಳವೆ ಮಾರ್ಗದಲ್ಲಿ ಸುಮಾರು 80 ಕಿ.ಮೀ. ಉದ್ದದಷ್ಟು ಮಾರ್ಗವು 45 ವರ್ಷಗಳಷ್ಟು ಹಳೆಯದಾಗಿದೆ ಹಾಗೂ 40 ಕಿ.ಮೀ. ಉದ್ದದಷ್ಟು ಹೊಸ ಅಡ್ಡ ಮಗ್ಗುಲಿನ ಒಳಚರಂಡಿ ಕೊಳವೆ ಮಾರ್ಗವನ್ನು ಸುಮಾರು 10 ವರ್ಷಗಳ ಹಿಂದೆ ಹಾಕಲಾಗಿದೆ. 20 ಕಿ.ಮೀ. ಉದ್ದದ ಉಪ ಮುಖ್ಯ ಒಳಚರಂಡಿ ಕೊಳವೆ ಮಾರ್ಗದಲ್ಲಿ 12 ಕಿ.ಮೀ. ಉದ್ದದ ಕೊಳವೆ ಮಾರ್ಗವು ಹಳೆಯದಾಗಿದ್ದು, 5ಕಿ.ಮೀ. ಉದ್ದದ ಉಪ ಮುಖ್ಯ ಕೊಳವೆ ಮಾರ್ಗವು ಹೊಸದಾಗಿರುತ್ತದೆ.
ಇ.	ಹಳೆಯ ಕೊಳವೆಗಳನ್ನು ಯಾವಾಗ ಅಳವಡಿಸಲಾಗಿತ್ತು?	ಹಳೆಯ ಒಳಚರಂಡಿ ವ್ಯವಸ್ಥೆಯ ಕೊಳವೆ ಮಾರ್ಗಗಳನ್ನು ಸುಮಾರು 45ವರ್ಷಗಳ ಹಿಂದೆ ಹಾಕಲಾಗಿತ್ತು.

ಈ:	ಅಸಮರ್ಪಕ ಸ್ಥಿತಿಯಲ್ಲಿರುವ ಒಳ ಚರಂಡಿ ಕೊಳವೆಗಳನ್ನು ಬದಲಾಯಿಸಲು ಸರಕಾರದ ಕ್ರಮಗಳೇನು?	ಹಳೆಯ ಕಾರ್ಯನಿರ್ವಹಿಸದ ಶಿಥಿಲಗೊಂಡಿರುವ ಒಳಚರಂಡಿ ಕೊಳವೆ ಮಾರ್ಗವನ್ನು ಹಂತ ಹಂತವಾಗಿ ಬದಲಾಯಿಸಲು ಬೆಂಗಳೂರು ಜಲಮಂಡಳಿ ಕ್ರಮ ಕೈಗೊಂಡಿದೆ. ಶಾಂತಿನಗರ ಪ್ರದೇಶದಲ್ಲಿ 2008-09ರಲ್ಲಿ 10 ರಿಂದ 12ಕಿ.ಮೀ. ಉದ್ದದ ಅಡ್ಡ ಮಗ್ಗುಲಿನ ಒಳಚರಂಡಿ ಕೊಳವೆ ಮಾರ್ಗವನ್ನು 120 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಬದಲಾಯಿಸ ಲಾಗುವುದು.
ಉ.	ಸುಸ್ಥಿತಿಯಲ್ಲಿರದ ಕೊಳವೆಗಳಿಂದಾಗಿ ಮಾಲಿನ್ಯ ಹಾಗೂ ಕುಡಿಯುವ ನೀರಿನ ಕೊಳವೆಗಳೊಂದಿಗಿನ ಸೋರುವಿಕೆ ಉಂಟಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?	- ಇಲ್ಲ -
ಊ.	ಹಾಗಿದ್ದಲ್ಲಿ, ಅಂಥ ಎಷ್ಟು ಕಡೆಗಳಲ್ಲಿ ಕೊಳವೆ ಬದಲಾವಣೆಗೆ ಸರಕಾರ ಕ್ರಮ ಜರುಗಿಸಿದೆ?	ಉದ್ಭವಿಸುವುದಿಲ್ಲ.
ಋ.	ವಿಶೇಷ ಯೋಜನೆಯೊಂದನ್ನು ರೂಪಿಸಿ ಕೂಡಲೇ ಹಳೆಯ ಕೊಳವೆಗಳನ್ನು ಬದಲಾಯಿಸಲು ಸರಕಾರ ಕ್ರಮ ಕೈಗೊಳ್ಳುವುದೆ?	ಬೆಂಗಳೂರು ನಗರ ಪ್ರದೇಶದಲ್ಲಿ ಪರಿಸರ ಕಾರ್ಯ ಯೋಜನೆಯಡಿಯಲ್ಲಿ (ಇ.ಎ.ಪಿ.) ಹಳೆಯ ಒಳಚರಂಡಿ ಕೊಳವೆ ಮಾರ್ಗಗಳನ್ನು ಬದಲಾಯಿಸಲು ಬೆಂಗಳೂರು ಜಲಮಂಡಳಿಯು ಒಂದು ವಿಶೇಷವಾದ ಯೋಜನೆಯನ್ನು ಕೈಗೊಂಡಿದೆ. ಅ) ಪರಿಸರ ಕಾರ್ಯ ಯೋಜನೆ (ಇ.ಎ.ಪಿ)-ಎ ಅಡಿಯಲ್ಲಿ 450 ಎಂ. ಎಂ. ರಿಂದ 1800 ಎಂ.ಎಂ. ಗಾತ್ರದ 29ಕಿ.ಮೀ. ಉದ್ದದ ಮುಖ್ಯ ಒಳಚರಂಡಿ ಮಾರ್ಗವನ್ನು ಪುನರ್ ನಿರ್ಮಾಣಗೊಳಿಸಲು 46.3 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಂಡಿದೆ.

		ಆ) ಪರಿಸರ ಕಾರ್ಯ ಯೋಜನೆ (ಇ.ಎ.ಪಿ)-ಬಿ ಅಡಿಯಲ್ಲಿ 51.60 ಕಿ.ಮೀ. ಉದ್ದದ ಒಳಚರಂಡಿ ಕೊಳವೆ ಮಾರ್ಗವನ್ನು ಪುನರ್ ನಿರ್ಮಾಣ ಮಾಡಲು ಹಾಗೂ 26ಕಿ.ಮೀ. ಉದ್ದದ ಮಾರ್ಗವನ್ನು ಹೊಸ ಕೊಳವೆಗಳೊಂದಿಗೆ ಬದಲಾಯಿಸುವ ಯೋಜನೆಯನ್ನು 176.00 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ರೂಪಿಸಲಾಗಿದೆ. ಪರಿಸರ ಕಾರ್ಯ ಯೋಜನೆ (ಇ.ಎ.ಪಿ)-ಎ ಮತ್ತು ಬಿ ಅಡಿಯಲ್ಲಿ ಶಾಂತಿನಗರ ಪ್ರದೇಶದಲ್ಲಿ ಸುಮಾರು 5 ರಿಂದ 6 ಕಿ.ಮೀ. ಉದ್ದದ ಉಪ ಮುಖ್ಯ ಒಳಚರಂಡಿ ಕೊಳವೆ ಮಾರ್ಗವನ್ನು ಬದಲಾಯಿಸಲಾಗುವುದು.